-ಸದರೀ ದರಖಾಸ್ತುದಾರರಾದ ಪುಟ್ಟಸ್ವಾಮಿಶೆಟ್ಟರ ಅರ್ಜಿಯನ್ನು 1896ನೇ ಇಸವಿ ಡಿಸೆಂಬರ್ ತಿಂಗಳ ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯು ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಪದ್ಮಣಿ ಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—೯೭ನೇ ಇಸವಿ ಅರ್ಜೀ ನಂಬರ್ 202.

ಮೃತಪಟ್ಟ ಕಾವೇರಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಅಮ್ಮಣ್ಣಿಯಮ್ಮ ಪುರಭೆ ವಂಶ ಲಕ್ಷ್ಮಮ್ಮನು, ಮೃತಪಟ್ಟ ಸದರೀ ಕಾವೇರಮ್ಮನವರಿಗೆ ತಂಗಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ನೊಪಲಾ ಸ್ಥಳದ ಸದರೀ ಅಮ್ಮಣ್ಣಿಯಮ್ಮ ಪುರಭೆ ವಂಶ ಲಕ್ಷ್ಮಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಕಾವೇರಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ಮಾಡುವದಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಗೆ ಸರ್ಟಿಫಿಕೇಟಿಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಮ್ಮಣ್ಣಿಯಮ್ಮ ಪುರಭೆ ವಂಶ ಲಕ್ಷ್ಮಮ್ಮನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಡಿಸೆಂಬರ್ ತಿಂಗಳ ತಾರೀಖು 4ರಲ್ಲು ಕೇ. ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾವೇರಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ನವಂಬರ್ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್ಲು,
ಡಿಸ್ಟ್ರಿಕ್ಟು ಜಡ್ಜ.

ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ಸ್ ೧೮೯೬ನೇ ಇಸವಿ ಅಕ್ಟೋಬರ್ ತಾರೀಖು 24ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಗುಂಡ್ಲು ತಾಲ್ಲೂಕು ಬೆರಂಬಾಡಿ ಮತ್ತು ಬಂಡಿಪುರದ ಜಂಗಲ್ ಗಳಲ್ಲಿ ವಣ ಚೌಬೀನೆಯನ್ನು ಖರೀದಿಗೆ ಪಡಿಯಲು ಯಿಷ್ಟವುಳ್ಳವರು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಗೆ ಆಗಲಿ ಅಥವಾ ಗುಂಡ್ಲು ರೇಂಜಾಫಿಸರಿಗಾಗಲಿ ದರಖಾಸ್ತುಗಳನ್ನು ಕೊಡಬಹುದು.

2. ದರಖಾಸ್ತುದಾರ ಸದರೀ ಚೌಬೀನೆಯನ್ನು ಜಂಗಲ್‌ಗಳಲ್ಲಿ ತಯಾರು ಮಾಡಿಸಿ ಸಾಗಿಸಿಕೊಳ್ಳಬೇಕು. ಮತ್ತು ಈ ಭಾಗದಲ್ಲಿ ಜಾರಿಯಲ್ಲಿರುವ ರೂಲ್ಸ್‌ಗಳಿಗೆ ಬದ್ಧನಾಗಿರತಕ್ಕದ್ದು.

3. ಈ ಚೌಬೀನೆಗಳು ಮೈಸೂರು ಉಡ್ತಿಯಾರ್ಡ ಮತ್ತು ಗುಂಡ್ಲು ಡಿಪೋ ದರಗಳಂತೆ ಆಯಾಯ ಜಂಗಲ್ ತಪಾರಿ ಮತ್ತು ಲದೈ ಫೂರ್ಜು ಜಾತಾ ಬೆಕರಿ ಮಾಡಲ್ಪಡುತ್ತವೆ.

4. ಖರೀದಿಗೆ ಪಡಿಯಲೂ ಇಷ್ಟವುಳ್ಳವರು ಈ ವಿಷಯವಾಗಿ ಜಾಸ್ತೀ ತಖ್ಮೀಲ್ ತಿಳಿಯಬೇಕೆಂದು ಇಚ್ಛಾಹಲ ವಿದ್ದಲ್ಲಿ ಗುಂಡ್ಲು ರೇಂಜಾಫಿಸರಿಗೆ ಆಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಅರ್ಜಿ ಗುಜರಾಯಿಸಿ ಕೊಳ್ಳಬಹುದಾಗಿರುತ್ತೆ.

ಎಂ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ನಗರದ ಡಿವಿಜ್ಞ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೮೯೬—೯೭ನೇ ಇಸವಿ ವಿ॥ ಅರ್ಜೀ ನಂಬರು 108.

ಅರ್ಜೀದಾರ ಸಾಗರದ ತಾಲ್ಲೂಕು ಕರೂರು ವಾಸಸ್ಥ ಶಾಮಂಣ ಎಂಬವರು ಮೈಸರಾವ ಸಾಗರ ತಾಲ್ಲೂಕು ಕರೂರು ಸ್ಥಳದ ಸೂರಪ್ಪ, ಸುಬ್ಬಮ್ಮ ಇವರ ಆಸ್ತಿವಿಷಯದಲ್ಲಿ—

ಸದರೀ ಮೈನರಾವ ಸೂರಪ್ಪ, ಸುಬ್ಬಮ್ಮ ಇವರಿಗೆ ಅಂಗನು ಆಗಬೇಕೆಂಬ ಹಕ್ಕಿನ ಮೇಲೆ ಸಾಗರ ತಾಲ್ಲೂಕು ಕರೂರು ಸ್ಥಳದಲ್ಲಿದ್ದ ಸೂರಯ್ಯನ ಅಯ್ಯಪ್ಪನ ವಗೈಸಾದ ಕರೂರು ಶಾಮಂಣನು ಸದರೀ ಮೈನರರ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬ್ಯೆಯ್ಯೆ ಅರ್ಜಿ ಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬ್ಯೆಯ್ಯೆ 1896ನೇ ಇಸವಿ ನವಂಬರ್ ತಾರೀಖು 27ರಲ್ಲು ಪೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1896ನೇ ಇಸವಿ ನವಂಬರ್ ತಿಂಗಳ 2ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಫಾರೆಸ್ಟು ಇಲಾಖಾ.

ನೋಟಿಫಿಕೇಷನ್.

ಸ್ ೧೮೭೮ನೇ ಇಸವಿ ಫಾರೆಸ್ಟ್ ರೂಲ್ಸ್ 37ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೆನಂದರೆ,—ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಬೆಂಕಿಪುರದ ಟ್ರಾವಲರಸ್ ಬಂಗ್ಲೆಯಿಂ ಭದ್ರಾನದಿಯಲ್ಲಿ ಈ ಕೆಳಗೆ ನಮೂದಿಸಿರುವ ನಾಟಾ ತೇಲಿಬಂದು ಸಿಕ್ಕಿ ಇರುತ್ತೆ.

ಮೇಲ್ಕಂಡ ನಾಟುಕ್ಕೆ ಹಕ್ಕುಪುಳ್ಳವರು ಈ ಸ್ತಿಹಾರ್ ತಾರೀಖು ಲಾಗಾಯತು ಎರಡು ತಿಂಗಳ ವಳಗಾಗಿ ಇವನೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕರ್ಣಸರ್‌ವೇಟರವರ ರೂಬರೂ ಖುದ್ದಾಗಿ ಆಗಲಿ ಅಥವಾ ಕ್ರನುವಾಗಿ ಅಧಿಕಾರ ಪಡೆದ ಮುಕ್ತಾತೀಕನ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು. ಆ ತಾರೀಖು ನಂತರ ಬರುವ ಹಕ್ಕುದಾರಿಯನ್ನು ಅಂಗೀಕರಿಸದೆ ಸರಕಾರದ ತರಫ್ ಸದರೀ ನಾಟುವನ್ನು ಹರಾಜು ಮಾಡಲ್ಪಡುವದು.

ನಾಟು ತಪಸೀಲ್.

ನಂಬರ್.	ಜಾತಿ.	ಉದ್ದ ಲಾಂಬಿ ಅಡಿ.	ಸುತ್ತಳತೆ ಅಡಿ.	ಷರಾ.
1	ಸಾಗುವಾನಿ ನಾಟು ..	14 ಅಡಿ, 4 ಅಂಗುಲ	7 ಅಡಿ, 8 ಅಂಗುಲ	

ಸಿ. ನಾರಾಯಣರಾವ್,
ಡೆಪ್ಯುಟಿ ಕರ್ಣಸರ್‌ವೇಟರ್.

ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮಾ.

19ನೇ ನವಂಬರ್ ಸ್ ೧೮೯೬ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಎಲೆಮೆಲಾಳು ಅಡಿಗೆ ಬೈಲ್ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗಾಗಿ ದರಖಾಸ್ತು ಬಂದಿರೋಣವರಿಂದ ಸ್ ೧೮೯೭ನೇ ಇಸವಿ ಜನವರಿ ತಾರೀಖು 8ನೇ ಶುಕ್ರವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್ದಾರ್ರ ರೂಬರೂ ಹರಿಹರಪುರ ಪೊಕ್ಕಾಂನಲ್ಲಿ ಬಹಿರಂಗವಾವ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮೊಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಛದರಖಾಸ್ತುದಾರನಿಗೆ ಮೂರು ವಾರಗಳಿಂವ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಕೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಹನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಛಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾಲಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂದೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಛಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು ಹಾಗೆ ಛಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲು ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಅದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕು ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ